ಕೆಲಸ ಮಾಡಿ, ಕೊನೆಗೆ 1994ರಲ್ಲಿ ಇವರ ಸೇವೆಯನ್ನು ಖಾಯಂ ಮಾಡಲಾಯಿತು. ಕೇವಲ ಇವರಿಗೆ ಕೆಲಸ ಖಾಯಂ ಆಯಿತೇ ವಿನಾಃ ಬೇರೆ ಯಾವುದೇ ಸೌಲಭ್ಯ ನೀಡಲಿಲ್ಲ. ಇದಲ್ಲದೆ ಅವರ ಹಿಂದಿನ ಸೇವಾವಧಿಯನ್ನು ಪರಿಗಣಿಸಿ ಹಾಗೂ ವಿದ್ಯಾರ್ಹತೆಯನ್ನು ಪರಿಗಣಿಸಿ ಇವರಿಗೆ ಬಡ್ತಿ ನೀಡಬೇಕು ಎಂಬುದೇ ನನ್ನ ಬೇಡಿಕೆ. ಈಗಾಗಲೇ ಅವರ ವಯೋಮಿತಿ ಮೀರಿದೆ ಸೇವಾವಧಿ ಕಡಿಮೆ ಇರುವುದರಿಂದ ಈಗಾಗಲೇ ನಿವೃತ್ತಿ ಹೊಂದಿದವರಿಗೆ ಹಾಗೂ ಶೀಘ್ರವಾಗಿ ನಿವೃತ್ತಿಹೊಂದುವವರಿಗೆ ನಿಗದಿತ ವೇತನವನ್ನು ಕೊಡುವುದರ ಜೊತೆಗೆ ಅವರ ಈ ಹಿಂದಿನ ಸೇವೆಯನ್ನು ಪರಿಗಣಿಸಿ ನೀಡಬೇಕು. ಸೇವೆಯಲ್ಲಿರುವವರಿಗೆ ಅವರ ಹಿಂದಿನ ಸೇವೆಯನ್ನು ಪರಿಗಣಿಸಿ ನಿಗದಿತ ಸಂಬಳವನ್ನು ನೀಡುವಂತೆ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :— ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ. ಸಂಬಂಧಪಟ್ಟವರಿಂದ ವರದಿಯನ್ನು ತರಿಸಿಕೊಂಡು ಸರಿಪಡಿಸುತ್ತೇವೆ.

(ಬ) ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಕುರಿತು.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) :— ಉಪಾಧ್ಯಕ್ಷರೆ, ನನ್ನ ಕ್ಷೇತ್ರದ ವ್ಯಾಪ್ತಿಗೆ ಚಿಕ್ಕನಾಯಕನಹಳ್ಳಿ, ಗುಬ್ಬಿ, ಶಿರಾ, ಈ ಮೂರು ತಾಲ್ಲೂಕುಗಳು ಬರುತ್ತವೆ. ಅಕ್ರಮವನ್ನು ಸಕ್ರಮ ಮಾಡುತಕ್ಕಂಥ ಸಮಿತಿಗೆ ಸಂಬಂಧಪಟ್ಟಂತೆ ಗುಬ್ಬಿ ಹಾಗೂ ಚಿಕ್ಕನಾಯಕನಹಳ್ಳಿ ಹೋಬಳಿಯಲ್ಲಿ ಈ ಸಮಿತಿಗೆ ನಾನು ಸದಸ್ಯ ಆಲ್ಲ. ಶಿರಾಕ್ಕೆ ಸಂಬಂಧಪಟ್ಟಂತೆ ಎರಡು ಹೋಬಳಿಗಳಲ್ಲಿ ಒಂದು ವಿಶೇಷ ಸಮಿತಿ ಇದೆ. ಈ ಸಮಿತಿಗೆ ಎರಡು ತಿಂಗಳಿಗೊಮ್ಮೆಯಾದರೂ ಒಂದು ಸಾರಿ ಭೇಟಿಯಾಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಒಂದು ಪಕ್ಷ ಭೇಟಿಯಾದರೂ ಒಂದು ಗಂಟೆ ಕುಳಿತು ಚರ್ಚೆ ಮಾಡುವುದಕ್ಕಾಗುತ್ತಿಲ್ಲ. ಈ ರೀತಿ ವಿಶೇಷವಾಗಿ ರಚನೆ ಮಾಡಿದಂತಹ ಸಮಿತಿ ಯಾವುದೇ ರೀತಿಯಾದ ವಿಲೇವಾರಿಯನ್ನು ಮಾಡುವುದಕ್ಕೆ ಆಗುತ್ತಿಲ್ಲ. ಇದರ ಜೊತೆಗೆ ನನ್ನ ಮತ್ತೊಂದು ಸಮಸ್ಯೆ ಏನೆಂದರೆ, ಅನೇಕ ತರಹದ ಕಾರಣಗಳಿಂದ ಇವತ್ತು ಸಮಿತಿಯ ಮುಂದೆ ಒಂದು ಅರ್ಜಿ ಬಂದಂಥ ಸಂದರ್ಭದಲ್ಲಿ ಅದು ಯಾವುದೇ ಕಾರಣಕ್ಕೂ ಅರ್ಜಿ ವಾಪಸ್ಸು ಹೋದರೆ ಸುಮಾರು 5 ರಿಂದ 10 ಸಾವಿರ ರೂಪಾಯಿ ದಂಡ ಕೊಡಬೇಕಾದಂಥ ಪರಿಸ್ಥಿತಿ. ಭ್ರಷ್ಟಾಚಾರದ ಮುಖೇನ ಹಣ ಪೋಲಾಗುತ್ತದೆ. ಇವತ್ತು ಹಣ ಕೊಡಲೇಬೇಕಾದ ಪರಿಸ್ಥಿತಿ ಇದೆ. ಇವತ್ತು ನನ್ನ ಸಲಹೆ ಏನೆಂದರೆ, ನನ್ನ ಕ್ಷೇತ್ರದ ವ್ಯಾಪ್ತಿಗೆ ಬರುವ ಮೂರು ತಾಲ್ಲೂಕುಗಳ ಭಾಗದಲ್ಲಿ ಅನೇಕ ಅರ್ಜಿಗಳು ಇತ್ಯರ್ಥವಾಗದೆ ಹಾಗೆಯೆ ಉಳಿದುಕೊಂಡಿವೆ. ಇವತ್ತು ನಿಮಗೆ ಕಾನೂನಿನಲ್ಲಿ ಅವಕಾಶ ಇರುವುದರಿಂದ ಒಂದು ವಿಶೇಷ ಸಮಿತಿಯನ್ನು ರಚನೆ ಮಾಡಿ, ಹೆಚ್ಚುವರಿ ಅರ್ಜಿಗಳನ್ನು ವಿಲೇವಾರಿ ಮಾಡತಕ್ಕಂಥ ಕೆಲಸವನ್ನು ಮಾಡಿದರೆ, ಬಹುಶಃ ಏನಾದರೂ ಕೂಡ ಪರಿಹಾರ ಸಿಗಬಹುದು ಮತ್ತು ವಿಶೇಷವಾದ ಒಂದು

ಸಮಿತಿಯ ಅವಶ್ಯಕತೆಯಿಂದ ಎಲ್ಲಾ ಅರ್ಜಿಗಳನ್ನು ಕೂಡ ಮಾನಿಟರ್ ಮಾಡತಕ್ಕಂಥ ಅವಕಾಶವಿರುತ್ತದೆ ಹಾಗೂ ಒಂದು ರೀತಿಯ ಕಂಟ್ರೋಲ್ ಇರುತ್ತದೆ. ಈಗ ಎಲ್ಲಿಯೂ ಕೂಡ ಕಂಟ್ರೋಲ್ ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಹಾಗೂ ವಿಶೇಷವಾಗಿ ನನ್ನ ಕ್ಷೇತ್ರದಲ್ಲಿ ಬಂದಿರತಕ್ಕಂಥ ಅರ್ಜಿಗಳಿಗೆ ಮತ್ತು ಅರ್ಜಿಗಳನ್ನು ಹಾಕುವಂತವರಿಗೆ ಯಾವುದೇ ರೀತಿಯ ನ್ಯಾಯ ಸಿಗುತ್ತಿಲ್ಲ. ಆದಕ್ಕೋಸ್ಕರ ವಿಶೇಷವಾದ ಸಮಿತಿಯನ್ನು ಆದಷ್ಟು ಬೇಗ ಮಾಡಬೇಕು. ಇನ್ನು ಕೇವಲ 8-9 ತಿಂಗಳು ಮಾತ್ರ ನಿಮಗೆ ಕಾಲವಿದೆ. ಆದುದರಿಂದ 15 ದಿವಸಗೊಳಗಾಗಿ ವಿಶೇಷ ಸಮಿತಿ ರಚನೆ ಮಾಡಿ ಅಲ್ಲಿಗೆ ಒಬ್ಬ ಎ.ಸಿ. ಅಥವಾ ಕಾನೂನಿನ ಪ್ರಕಾರ ಯಾರನ್ನಾದರೂ ನೇಮಕಾತಿ ಮಾಡುವುದಕ್ಕೆ ನಿಮಗೆ ಅವಕಾಶ ಇದೆ. ಈ ಕಾರ್ಯವನ್ನು ಆದಷ್ಟು ಬೇಗ ಮಾಡಬೇಕೆಂದು ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ದಯಮಾಡಿ ಈ ಕೆಲಸವನ್ನು ಮಾಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಸನ್ಮಾನ್ಯ ಉಪಾಧ್ಯಕ್ಷರೆ, ಅಲ್ಲಿನ ಸತ್ಯಸಂಗತಿಯೇ ಬೇರೆ. ನಾನು ಆ ಸಮಿತಿಯ ಅಧ್ಯಕ್ಷನಾಗಿದ್ದೇನೆ. ಇಲ್ಲಿ ದುಡ್ಡು ತೆಗೆದುಕೊಳ್ಳುತ್ತಾರೆಂದು ಮತ್ತು ವರ್ಷಗಟ್ಟಲೆ ಅರ್ಜಿಗಳನ್ನು ಮುಂದಕ್ಕೆ ಹಾಕುತ್ತಾರೆಂದು ಮಾನ್ಯ ಸದಸ್ಯರು ಗುರುತರವಾದ ಆಪಾದನೆಯನ್ನು ನಾವು ಸದನದಲ್ಲಿರುವಾಗಲೇ ಮಾಡುತ್ತಾ ಹೋದರೆ ನಮ್ಮ ಗತಿ ಏನು?

ಶ್ರೀ ಟಿ.ಬಿ. ಜಯಚಂದ್ರ :— ಅರ್ಜಿಗಳನ್ನು ಇತ್ಯರ್ಥ ಮಾಡುವುದಕೊಸ್ಕರ ಒಂದು ವಿಶೇಷವಾದ ಸಮಿತಿಯನ್ನು ಮಾಡಬೇಕೆಂದು ನಾನು ಸರ್ಕಾರದ ಮುಂದೆ ಹೇಳಿದ್ದೇನೆಯೇ ಹೊರತು, ನೇರವಾಗಿ ಚಿಕ್ಕನಾಯಕನಹಳ್ಳಿಯಲ್ಲಿ ಅವ್ಯವಹಾರ ನಡೆಯುತ್ತದೆಂದು ಯಾರ ಮೇಲು ಆರೋಪವನ್ನು ಮಾಡಿಲ್ಲ. ಸಮಗ್ರವಾಗಿ ನನ್ನ ಮೂರು ತಾಲ್ಲೂಕುಗಳಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬುದು ಗೊತ್ತಿದೆ. ಇದು ಮಾನ್ಯ ಬೈರೇಗೌಡರಿಗೆ ಮತ್ತು ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೂ ಹಾಗೂ ಎಲ್ಲರಿಗೂ ಗೊತ್ತಿರತಕ್ಕಂಥದ್ದು "ಕುಂಬಳಕಾಯ ಕಳ್ಳ ಎಂದರೆ, ನೀವೇಕೆ ಹೆಗಲು ಮುಟ್ಟುಕೊಂಡು ನೋಡತಕ್ಕಂಥ ಕೆಲಸವನ್ನು" ಮಾಡುತ್ತೀರಿ?

ಶ್ರೀ ಜೆ.ಸಿ ಮಾಧುಸ್ವಾಮಿ :— ಅಧ್ಯಕ್ಷರೇ, It is the previlege of the Members opf the Assembly. ನಾನು ಆ ಸಮಿತಿಯ ಅಧ್ಯಕ್ಷನಾಗಿದ್ದು, ವ್ಯಾಪಕವಾದ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಶೂನ್ಯವೇಳೆಯಲ್ಲಿ ಆರೋಪ ಮಾಡುತ್ತಿರುವಾಗ ನಾವು ಅಸೆಂಬ್ಲಿಯಲ್ಲಿ ಸುಮ್ಮನೆ ಕುಳಿತುಕೊಳ್ಳಬೇಕೇ?

ಉಪಾಧ್ಯಕ್ಷರು :— ಸಚಿವರು ಏನು ಉತ್ತರ ಹೇಳುತ್ತಾರೆಂದು ನೋಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಸರ್ಕಾರವನ್ನು ಕೇಳಿಕೊಂಡು ಅವರು ಇನ್ನು ಬೇಕಾದರೆ 10 ಸಮಿತಿಗಳನ್ನು ಮಾಡಿಕೊಳ್ಳಲಿ. ನಾವೇನು ಬೇಡವೆಂದು ಹೇಳುವುದಿಲ್ಲ. ಆದರೆ ಭ್ರಷ್ಟಾಚಾರ ವ್ಯಾಪಕವಾಗಿ ನಡೆಯುತ್ತಿದೆ ಮತ್ತು ಅರ್ಜಿಗಳನ್ನು ಸರಿಯಾಗಿ

ವಿಲೇವಾರಿ ಆಗುತ್ತಿಲ್ಲ ಎಂಬ ಪಾಯಿಂಟನ್ನು ಅವರು ಹೇಳುತ್ತಿದ್ದಾರೆ. ನಾನು ಅಲ್ಲಿ ಅಧ್ಯಕ್ಷನಾಗಿದ್ದೇನೆ ಮತ್ತು ಮಾನ್ಯ ಶಿವನಂಜಪ್ಪನವರು ಅಧ್ಯಕ್ಷರಾಗಿದ್ದಾರೆ. ಈ ರೀತಿ ಅವರು ಆರೋಪ ಮಾಡಿದರೆ ನಮ್ಮ ಗತಿ ಏನು? If he sends a wrong signal outside ಆಗ ನಮ್ಮ ಪರಿಸ್ಥಿತಿ ಏನಾಗುತ್ತದೆ. ಇವರು ಮಾತ್ರ ಹರಿಶ್ಚಂದ್ರ, ನಾವೆಲ್ಲಾ ಅಯೋಗ್ಯರೆ? Let him ask any number of Committees. ಅವರ ಜೊತೆಯಲ್ಲಿ ಕುಳಿತುಕೊಳ್ಳುವ ಶಾಸಕರು ಈ ಸಮಿತಿಯಲ್ಲಿದ್ದರೂ ಸಹ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆಯೇ?.

ಶ್ರೀ ಟಿ.ಬಿ. ಜಯಚಂದ್ರ :— ಮೊದಲನೇ ಸಾರಿ ಅಳತೆ ಮಾಡುವಾಗ 35 ಗುಂಟೆ ಎಂದು ಅಳೆಯುತ್ತಾನೆ, ಎರಡನೇ ಸಾರಿ ಅಳತೆ ಮಾಡುವಾಗ 3 ಎಕರೆ 35 ಗುಂಟೆ ಎಂದು ಅಳೆಯುತ್ತಾರೆ. ಇಲ್ಲಿ ಎಂಟೈರ್ ಸ್ಕೆಚ್ ಬದಲಾವಣೆ ಆಗುತ್ತಿದೆ.

(ಗೊಂದಲ)

ಶ್ರೀ ಜಿ.ಎಸ್. ಶಿವನಂಜಪ್ಪ :— ಈ ಸಮಿತಿಗೆ ಅವರೇ ಬೇಕಾದರೆ ಅಧ್ಯಕ್ಷರಾಗಲಿ, ಬೇಡವೆಂದು ಯಾರು ಹೇಳುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಕೌನ್ಸಿಲ್‌ನಲ್ಲಿ ಕುಳಿತುಕೊಂಡು, ಆಶ್ರಯ ಯೋಜನೆಯಲ್ಲಿ ಶಾಸಕರು ದುಡ್ಡು ತೆಗೆದುಕೊಂಡು ಸೈಟ್‌ಗಳನ್ನು ಮತ್ತು ಮನೆಗಳನ್ನು ಕೊಡುತ್ತಾರೆಂದು ಅಲ್ಲಿ ಪ್ರಸ್ತಾಪ ಮಾಡಿದರು ನಾವು ಸಹಿಸಿಕೊಳ್ಳಬೇಕು ಮತ್ತು ಎಲ್ಲಿಯೂ ಬಗರ್ ಹುಕ್ಕುಂ ಮಂಜೂರು ಮಾಡುವುದಕ್ಕೆ ದುಡ್ಡು ತೆಗೆದುಕೊಂಡಿದ್ದಾರೆಂದು ಹೇಳಿದರು ಸುಮ್ಮನೆ ಇರಬೇಕೆ? ಇದನ್ನು ಎನ್‌ಕ್ವಾಯರ್ ಮಾಡಿಸಿ ಪ್ರೂಫ್ ಮಾಡಲಿ? ಶೂನ್ಯವೇಳೆಯಲ್ಲಿ ನಮಗೂ ನೋಟಿಸ್ ಕೊಟ್ಟು ಈ ವಿಷಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡಿ. He has raised the name of Chikkanayakanahalli, he has taken the name of the Gubbi and he has taken the name of Sira. ನಾವು ಮೂರು ಜನ ನಮ್ಮ ಕ್ಷೇತ್ರಗಳಲ್ಲಿ ಏನು ಹೇಳಬೇಕು?

(ಗೊಂದಲ)

ಶ್ರೀ ಸಿ. ಚನ್ನಿಗಪ್ಪ :— ನಮ್ಮ ಜಿಲ್ಲೆಯಲ್ಲಿ ಸಾಗುವಳಿ ಚೀಟಿ ಕೊಡುವುದರಲ್ಲಿ ಯಾವುದೇ ರೀತಿಯ ಅನ್ಯಾಯವಾಗಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :— ಇವತ್ತು ಭ್ರಷ್ಟಾಚಾರ ಎನ್ನತಕ್ಕಂಥದ್ದು ಕೆಳ ಹಂತದಲ್ಲಿ ನಡೆಯುತ್ತಿದೆ ಎಂದು ಹೇಳಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು) :— ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರ ಆಕ್ಷೇಪಣೆ ಏನೆಂದರೆ, ನಾವು ಅಧ್ಯಕ್ಷರಾಗಿರತಕ್ಕಂಥ ಸಮಿತಿಯಲ್ಲಿ ವ್ಯಾಪಕವಾದಂತಹ ರೀತಿಯಲ್ಲಿ ಭ್ರಷ್ಟಾಚಾರ ಆಗಿದೆ ಎಂದು ಆರೋಪ ಮಾಡಿದರೆ ಅದು ನನ್ನ ವ್ಯಕ್ತಿತ್ವದ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ, ನಿರ್ದಿಷ್ಟವಾದಂಥ ಪ್ರಕರಣಗಳಿದ್ದರೆ, ಅದನ್ನು ಮಾತ್ರ ನೀವು ಮಾಡಿ ಅಥವಾ ನಮಗೂ ಇದರಲ್ಲಿ ಸೇರಿಸಿಕೊಂಡರೆ ನಾವೂ ಕೂಡ ಈ ವಿಚಾರದಲ್ಲಿ ಪ್ರಸ್ತಾಪ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಆದುದರಿಂದ, ತಾವು ನಿರ್ದಿಷ್ಟವಾದ ಪ್ರಕರಣಗಳಿದ್ದರೆ ಮಾನ್ಯ ಮಂತ್ರಿಗಳು ಈಗ ಉತ್ತರ ಕೊಡುತ್ತಾರೆ. ಇದು ಅವರ ಮೇಲೆ ಸಂಬಂಧಪಡತಕ್ಕಂಥದ್ದಲ್ಲ ಎನ್ನುವ ರೀತಿಯಲ್ಲಿ ಆಗಬೇಕು.

ಶ್ರೀ ಜಿ.ಎಸ್. ಶಿವನಂಜಪ್ಪ :— ಅವರೇ ಬೇಕಾದರೆ ಅಧ್ಯಕ್ಷರಾಗಲಿ, ನಮಗೇನೂ ಬೇಕಾಗಿಲ್ಲ. ಅವರು ಹೇಳಿರುವ ಮಾತುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಸಿ. ಚಿನ್ನಿಗಪ್ಪ : ತುಮಕೂರು ಜಿಲ್ಲೆಯಲ್ಲಿ ಯಾವುದೇ ರೀತಿಯ ಅನ್ಯಾಯವಾಗಿಲ್ಲ. ಅವರು ಹೇಳಿರುವ ಮಾತನ್ನು ದಯಮಾಡಿ ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಬೇಕಾದರೆ 100 ಸಮಿತಿಗಳನ್ನು ಮಾಡಿಸಿಕೊಳ್ಳಲಿ, ಯಾರು ಬೇಡವೆನ್ನುತ್ತಾರೆ. ಈ ರೀತಿ ಅವರು ಮಾತನಾಡಿದರೆ ಹೊರಗೆ ಜನ ನಮ್ಮನ್ನು ಏನನ್ನುತ್ತಾರೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಸಮಿತಿಗಳನ್ನು ಹೆಚ್ಚುಮಾಡಿ ಎನ್ನತಕ್ಕಂಥ ವಿಷಯ ಸರಿ, ಅದನ್ನು ಬೇಕಾದರೆ ಹೆಚ್ಚಿಗೆ ಮಾಡಿಸಿಕೊಳ್ಳಿ. ಆದರೆ ಇಲ್ಲಿ ಪ್ರಶ್ನೆ ಬಂದಿರತಕ್ಕಂಥದ್ದು, ನಾವು ಅಧ್ಯಕ್ಷರಾಗಿರತಕ್ಕಂಥ ಸಮಿತಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ ಎಂದು ನೀವು ಹೇಳಿದರೆ ಅದಕ್ಕೆ ನಾವು ಭಾಗಿಗಳು ಎನ್ನತಕ್ಕಂಥ ಪ್ರಶ್ನೆ ಬರುತ್ತದೆ. ನಿಮಗೆ ಸಮಿತಿ ಬೇಕಾದರೆ ಪ್ರತ್ಯೇಕವಾಗಿ ಮಾಡಿಸಿಕೊಳ್ಳಿ, ಬೇಡವೆಂದು ಯಾರೂ ಹೇಳುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಅವರ ಕ್ಷೇತ್ರದಲ್ಲಿ ಊರಿಗೊಂದು ಸಮಿತಿ ಮಾಡಿಸಿಕೊಳ್ಳಲಿ, ನಾವೇನೂ ಕೇಳುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :— ನಾನು ಹಲವಾರು ಬಾರಿ ಹೇಳುತ್ತಿರುವುದೇನೆಂದರೆ, ಇವತ್ತು ಕೆಳ ಹಂತದಲ್ಲಿ ಅಂದರೆ, ಸ್ಕೆಚ್ ಮಾಡತಕ್ಕಂಥ ಸಂದರ್ಭದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಹಾಗೂ ಒಬ್ಬ ಸರ್ವೆಯರ್ ಮಟ್ಟದಲ್ಲಿ ಕೂಡ ಭ್ರಷ್ಟಾಚಾರ ನಡೆಯುತ್ತಿದ್ದು, ಇವತ್ತಿನದಿವಸ ಇವುಗಳನ್ನೆಲ್ಲಾ ಮಾನಿಟರ್ ಮಾಡುವುದಕ್ಕೆ ಆಗುತ್ತಿಲ್ಲ. ಅದಕ್ಕೋಸ್ಕರ ಒಂದು ವಿಶೇಷ ಸಮಿತಿಯನ್ನು ಮಾಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಜಿ. ಸೋಮಶೇಖರ್ (ಕಂದಾಯ ಸಚಿವರು) :— ಸನ್ಮಾನ್ಯ ಉಪಾಧ್ಯಕ್ಷರೆ, ಅಕ್ರಮ ಮತ್ತು ಸಕ್ರಮ ಸಮಿತಿಗಳನ್ನು ರಚನೆ ಮಾಡಿರುವ ಉದ್ದೇಶ ಏನೆಂದರೆ, ಇವತ್ತು ಸರ್ಕಾರಿ ಜಮೀನಿನಲ್ಲಿ ಹತ್ತಾರು ವರ್ಷಗಳಿಂದ ಯಾರು ಸಾಗುವಳಿ ಮಾಡಿಕೊಂಡು ಬಂದಿರತಕ್ಕಂಥ ಬಡವರಿಗೆ ಜಮೀನುಗಳನ್ನು ಸಕ್ರಮ ಮಾಡತಕ್ಕಂಥ ಉದ್ದೇಶದಿಂದಲೇ ಕಾಲ ಮೀರಿ ಹೋಗಿದ್ದರೂ ಕೂಡ ಕಾನೂನಿನಲ್ಲಿ ತಿದ್ದುಪಡಿ ತಂದು ಸಮಯವನ್ನು ವಿಸ್ತರಣೆ ಮಾಡಿದ್ದೇವೆ. ಈ ವರ್ಷ ನವೆಂಬರ್‌ವರೆಗೆ ಕಾಲಾವಕಾಶವನ್ನು ಕೊಟ್ಟಿದ್ದೇವೆ. ಈ ಒಂದು ಪ್ರಕ್ರಿಯೆ ಸಮರೋಪಾದಿಯಲ್ಲಿ ರಾಜ್ಯಾದ್ಯಾಂತ ಮಾಡಬೇಕೆಂದು ಇದಕ್ಕೆ ಇನ್ನು ಕಾಲಮಿತಿಯನ್ನು ಕೊಟ್ಟು ಕೆಲಸವನ್ನು ಮಾಡುತ್ತಿದ್ದೇವೆ. ಎಷ್ಟೋ ಕಡೆ ಈ ದಿಕ್ಕಿನಲ್ಲಿ ಸಮಿತಿಗಳು ಕೆಲಸ ಮಾಡುತ್ತಿವೆ. ಕೆಲವು ಕಡೆ ಇದರಲ್ಲಿ ಇರತಕ್ಕಂಥ ಎಡರು ತೊಡರುಗಳನ್ನು ಗುರ್ತಿಸಿ ಅದನ್ನು ನಿವಾರಣೆ ಮಾಡುವುದಕ್ಕೆ ಉಪಾಯಗಳನ್ನು ನಾವು ಕಂಡುಹಿಡಿಯುತ್ತಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ಕೆಲವು ಕಡೆ ಸಮಿತಿಯವರು ತಾರತಮ್ಯ ಮಾಡುತ್ತಿದ್ದಾರೆ ಎಂಬ ದೂರುಗಳು ಬಂದಿವೆ. ಒಂದೇ ಸರ್ವೆ ನಂಬರ್‌ನಲ್ಲಿ 10 ಜನ ಸಾಗುವಳಿದಾರರು ಇದ್ದಾಗ, 10 ಜನರಲ್ಲಿ 9 ಜನ ಸಮಿತಿಯ ಪರವಾಗಿಲ್ಲದಿದ್ದರೆ, ಒಬ್ಬ ಮಾತ್ರ ಇವರ ಪರವಾಗಿದ್ದಾಗ, ಈತನ ಕೇಸ್ ಮಾತ್ರ ತೀರ್ಮಾನ ಮಾಡಿ ಉಳಿದ 9 ಕೇಸ್‌ಗಳನ್ನು ರಿಜೆಕ್ಟ್ ಮಾಡತಕ್ಕಂಥದ್ದು ನಡೆಯುತ್ತಿದೆ. ಇದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಇದಕ್ಕಾಗಿ ನಾನು ಏನು ಮಾಡಿದ್ದೇನೆಂದರೆ, ಯಾವುದೇ ಪಾರ್ಟಿಯವರಾಗಿರಲಿ ಅಥವಾ ವರ್ಗದವರಾಗಿರಲಿ, ಸಮಿತಿಯವರು ಒಂದು ಸರ್ವೆ ನಂಬರ್‌ನ್ನು ತೆಗೆದುಕೊಂಡರೆ ಆ ಸರ್ವೆ ನಂಬರ್‌ಗೆ ಸಂಬಂಧಪಟ್ಟ ಎಲ್ಲಾ ಆರ್ಜಿಗಳನ್ನು ತೀರ್ಮಾನ ಮಾಡಬೇಕೆಂದು ನಿರ್ದೇಶನ ಕೊಟ್ಟಿದ್ದೇನೆ. ಹಾಗೆಯೇ ಒಂದು ತಾಲ್ಲೂಕಿನಲ್ಲಿ ಎರಡು ಸಮಿತಿ ಇದ್ದು ಒಂದು ಸಮಿತಿಯಲ್ಲಿ ಪ್ರಿಜುಡಿಷಿಯಲ್ ಪ್ರಕರಣ ಇದ್ದರೆ, ಆ ಒಂದು ಪ್ರಕರಣವನ್ನು ಇನ್ನೊಂದು ಸಮಿತಿಗೆ ವರ್ಗಾವಣೆ ಮಾಡತಕ್ಕಂಥ ಅಧಿಕಾರವನ್ನು ಜಿಲ್ಲಾಧಿಕಾರಿಯವರಿಗೆ ಕೊಟ್ಟಿದ್ದೇವೆ. ಹೀಗೆ ಅನೇಕ ತೊಂದರೆಗಳನ್ನು ಹುಡುಕಿ, ಇವುಗಳನ್ನು ತಡೆಯುವುದಕ್ಕೋಸ್ಕರ ಈಗ ತಿದ್ದುಪಡಿಗಳನ್ನು ತರುತ್ತಿದ್ದೇವೆ. ನಮ್ಮ ಮುಖ್ಯ ಉದ್ದೇಶ ಏನೆಂದರೆ, ಆದಷ್ಟು ಬೇಗ ಈ ಸಕ್ರಮ ಮಾಡಿ ಬಡವರಿಗೆ ಊಳುವ ಜಮೀನನ್ನು ಸಕ್ರಮ ಮಾಡಬೇಕೆಂದು ಉದ್ದೇಶ ಇಟ್ಟುಕೊಳ್ಳಲಾಗಿದೆ. ಮಾನ್ಯ ಜಯಚಂದ್ರರವರು ಕೆಲವು ಕಡೆ ಸರಿಯಾದ ರೀತಿಯಲ್ಲಿ ಕೆಲಸ ಆಗುತ್ತಿಲ್ಲವೆಂದು ಪ್ರಸ್ತಾಪ ಮಾಡಿದ್ದಾರೆ. ನಮಗೆ ಅವಶ್ಯಬಿದ್ದರೆ ಜಿಲ್ಲಾಧಿಕಾರಿಗಳನ್ನು ಕೇಳಿ ವರದಿಯನ್ನು ತರಿಸಿಕೊಂಡು ಇನ್ನೊಂದು ಸಮಿತಿ ಮಾಡುವ ಅವಶ್ಯಕತೆ ಇದ್ದರೆ ಖಂಡಿತ ರಚನೆ ಮಾಡೋಣ. ಆದಷ್ಟು ತ್ವರಿತಗತಿಯಲ್ಲಿ ಈ ಪ್ರಕರಣಗಳನ್ನು ಇತ್ಯರ್ಥ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೇವೆ.